# ಪ್ರಾರ್ಥನೆ

## ಶಾರದಾದೇವಿ ಪ್ರಾರ್ಥನೆ

ತಾಯಿದೇವಿ ಜಗಜ್ಜನನಿ ದಿವ್ಯಮಾತೆ ಶಾರದೆ
ನಮೋ ದೇವಿ ನಮೋ ತಾಯಿ ಶಕ್ತಿದಾತೆ ಶಾರದೆ ॥

ವೇದಮಾತೆ ಮುಕುತಿದಾತೆ ನಮೋ ದೇವಿ ಶಾರದೆ
ಯೋಗಮಾತೆ ಭಕುತಿದಾತೆ
ನಮೋ ಜನನಿ ಶಾರದೆ ॥

ಕ್ಷಮಾಶೀಲೆ ಕರುಣೆಗಂಗೆ ಶಕ್ತಿದೇವಿ ಶಾರದೆ
ನಿತ್ಯರೂಪೆ ಶಾಂತಿದಾತೆ ದಿವ್ಯಜ್ಯೋತಿ ಶಾರದೆ ॥

ಗೃಹಿಣಿದೇವಿ ಶುಭ್ರವಸನೆ ಮಹಾಸಾಧ್ವಿ ಶಾರದೆ
ತಪೋನಿಧಿ ಪವಿತ್ರದೇವಿ ತ್ಯಾಗಶೀಲೆ ಶಾರದೆ ॥

ಯುಗಾಚಾರ್ಯ ಯೋಗಿಯಿಂದ
ಪೂಜೆ ಪಡೆದ ಶಾರದೆ
ರಾಮಕೃಷ್ಣ ಪರಮಹಂಸ ದೇವಪತ್ನಿ ಶಾರದೆ ॥

ಮಂತ್ರದೀಕ್ಷೆ ಕೃಪಾಭಿಕ್ಷೆ ಜನಕೆ ಇತ್ತ ಶಾರದೆ
ತತ್ತ್ವಬೋಧೆ ಯೋಗವಿದ್ಯೆ ಜಗಕೆ ಕೊಟ್ಟ ಶಾರದೆ ॥

ಲಲಿತೆ ದುರ್ಗೆ ವಾಣಿ ಲಕ್ಷ್ಮಿ
ಮಹಾಮಾಯೆ ಶಾರದೆ
ಸೀತೆ ರಾಧೆ ಯೋಗಮಾತೆ ಮಹಾಶಕ್ತಿ ಶಾರದೆ ॥

ನಗೆಯ ಬೀರು, ಕೃಪೆಯ ತೋರು
ಕೃಪಾಮಯಿ ಶಾರದೆ
ಭಕುತಿ ನೀಡು, ಶಕುತಿ ನೀಡು
ಮಹಾದೇವಿ ಶಾರದೆ ॥

ಯೋಗಸಿದ್ಧಿ ಸುಖವ ನೀಡು ಸಿದ್ಧಿದಾತೆ ಶಾರದೆ
ಜ್ಞಾನಭಿಕ್ಷೆ ನೀಡಿ ಹರಸು ಅನ್ನದಾತೆ ಶಾರದೆ ॥

ನಮನ ನಿನಗೆ, ಶರಣು ನಿನಗೆ ಭಕ್ತಿದಾತೆ ಶಾರದೆ
ಹರಿದು ಬಿಸುಡು ಭವದ ಪಾಶ
ಮುಕ್ತಿದಾತೆ ಶಾರದೆ ॥

# ಸೂಕ್ತಿಪ್ರಭ

## ಶ್ರೀಮಾತಾ ವಚನಸುಧೆ

### ಸಾಧನೆ ಮತ್ತು ಕೃಪೆ

**ಭ**ಗವಂತನನ್ನು ಕಾಣುವುದು ಅವನ ಕೃಪೆಯಿಂದ ಮಾತ್ರವೇ ಸಾಧ್ಯ. ಆದರೆ ಜಪ–ಧ್ಯಾನ ಮಾಡಲೇಬೇಕು. ಇದರಿಂದ ಮನಸ್ಸಿನ ಕೊಳೆ ಹೋಗುತ್ತದೆ. ಹಾಗೆಯೇ ಪೂಜೆ ಮೊದಲಾದುವನ್ನೂ ಮಾಡಬೇಕು. ಕೈಯಲ್ಲಿ ಹಿಡಿದ ಹೂವು ಸುವಾಸನೆಯನ್ನು ಕೊಡುವಂತೆ, ತೇಯುವಾಗ ಚಂದನವು ಸುಗಂಧವನ್ನು ಬೀರುವಂತೆ, ಯಾವಾಗಲೂ ದೇವರ ಚಿಂತನೆ ಮಾಡುವುದರಿಂದ ಜೀವ ಎಚ್ಚರಗೊಳ್ಳುತ್ತದೆ. ಆದರೆ ನೀನು ಆಸೆಗಳನ್ನು ಹೋಗಲಾಡಿಸಿಕೊಂಡರೆ ಈ ಕ್ಷಣದಲ್ಲಿಯೇ ಆತನನ್ನು ಕಾಣಬಹುದು.

**ಸಾ**ಧನೆಗಳ ಉದ್ದೇಶವೇನೆಂದರೆ, ಮನಸ್ಸನ್ನು ಭಗವಂತನ ಪಾದಗಳಲ್ಲಿ ಸ್ಥಿರವಾಗಿ ನಿಲ್ಲಿಸುವುದು; ಆ ಭಾವನೆಯಲ್ಲಿಯೇ ಮುಳುಗಿರುವುದು. ಭಗವಂತನ ನಾಮಜಪ ಮಾಡುವುದು.

**ಬೆ**ಳಿಗ್ಗೆ ಮತ್ತು ಸಂಜೆ ಧ್ಯಾನ ಮಾಡು. ಮನಸ್ಸನ್ನು ಶಾಂತವಾಗಿ ಇಟ್ಟುಕೊಂಡು ಧ್ಯಾನ–ಪ್ರಾರ್ಥನೆಗಳನ್ನು ಅಭ್ಯಾಸ ಮಾಡು. ಅದು ಕಷ್ಟವೇನೋ ನಿಜ. ಅದಕ್ಕಿಂತ ಒಂದು ಗುಡ್ಡ ಅಗೆಯುವುದು ಎಷ್ಟೋ ಸುಲಭ. ಶ್ರೀರಾಮಕೃಷ್ಣರ ಕೃಪೆಯಿಲ್ಲದೆ ಏನೂ ಸಾಧ್ಯವಿಲ್ಲ.

**ಮ**ಗೂ, ಎಷ್ಟೋ ಪುಣ್ಯದಿಂದಾಗಿ ನಿನಗೆ ಈ ಮನುಷ್ಯಜನ್ಮ ಸಿಕ್ಕಿದೆ. ದೇವರಲ್ಲಿ ಭಕ್ತಿಯಿಡು. ಕಷ್ಟಪಟ್ಟು ಕೆಲಸ ಮಾಡು. ಪ್ರಯತ್ನವಿಲ್ಲದೆ ಏನನ್ನಾದರೂ ಸಾಧಿಸಲು ಸಾಧ್ಯವೇ?

**ನಿ**ರಾಶನಾಗದೆ ಪ್ರಾರ್ಥನೆಯನ್ನು ಮುಂದುವರಿಸು. ಎಲ್ಲವೂ ಸಕಾಲದಲ್ಲಿ ಆಗುತ್ತದೆ.... ಭಗವಂತನ ದರ್ಶನ ಎಂದರೆ ಅಷ್ಟು ಸುಲಭವೇ? ಆದರೆ ಈ ಸಲದ ಅದೃಷ್ಟವೆಂದರೆ, ಶ್ರೀರಾಮಕೃಷ್ಣರು ಸುಲಭದ ದಾರಿಯನ್ನು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಎಲ್ಲರಿಗೂ ಭಗವಂತನನ್ನು ಕಾಣಲು ಸಾಧ್ಯ.

**ನ**ಡೆ–ನುಡಿ–ಸಾಧನೆಗಳಲ್ಲಿ ಪ್ರಾಮಾಣಿಕನಾಗಿರು. ನೀನು ಧನ್ಯನಾಗುತ್ತೀಯೆ! ಭೂಮಿಯ ಎಲ್ಲ ಜೀವಿಗಳ ಮೇಲೂ ಭಗವಂತನ ಕೃಪೆ ಯಾವಾಗಲೂ ಇದ್ದೇ ಇರುತ್ತದೆ. ಅದನ್ನು ಬಾಯಿಬಿಟ್ಟು ಕೇಳಬೇಕಾಗಿಲ್ಲ. ಪ್ರತಿದಿನ ಧ್ಯಾನ ಮಾಡು. ಅವನ ಅನಂತಕೃಪೆ ನಿನಗೇ ಅರ್ಥವಾಗುತ್ತದೆ. ಅವನಿಗೆ ಬೇಕಾಗಿರುವುದು ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ಪ್ರೀತಿ. ನೀನು ಬಾಯಿಮಾತಿನಲ್ಲಿ ಏನು ಹೇಳುತ್ತೀಯೋ ಅದು ಅವನಿಗೆ ಮುಟ್ಟುವುದಿಲ್ಲ.

**ನೀ**ನು ಯಾವುದಕ್ಕೋಸ್ಕರ ಹಂಬಲಿಸುತ್ತೀಯೋ ಅದನ್ನೇ ಪಡೆಯುತ್ತೀಯೆ.